ತಮ್ಮ ಹತ್ತಿರ ಮಾತನಾಡಿದಾಗ, 'ಆಯಿತು, ಯಡಿಯೂರಪ್ಪನವರೆ, ಮಾತನಾಡೋಣ' ಎಂದಿರಿ. ಆದರೆ, ಇವೊತ್ತು ನೋಡಿದರೆ ಅಲ್ಲಿನ ಪರಿಸ್ಥಿತಿ ದಿನೇದಿನೇ ಕೈತಪ್ಪಿ ಮಿತಿಮೀರಿ ಹೋಗುತ್ತಿದೆ. ಅದಕ್ಕೋಸ್ಕರ, ತಾವು ಇವೊತ್ತು ಯಾರನ್ನಾದರೂ ಅಲ್ಲಿಗೆ ಕಳುಹಿಸಿಕೊಟ್ಟಿದ್ದೀರಾ? ಏನು ಕ್ರಮ ಕೈಗೊಂಡಿದ್ದೀರಿ? ತಾವು ಅನ್ಯಥಾ ಭಾವಿಸದಿದ್ದರೆ, ಆ ಜಿಲ್ಲೆಯ ಹಿತದೃಷ್ಟಿಯಿಂದಾದರೂ ತಾವು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್: ಬೆಳಿಗ್ಗೆ ನಾನೂ ಸಹ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿದೆ. ಅಲ್ಲಿಗೆ ಸರ್ಕಾರದ ವತಿಯಿಂದ ಯಾರಾದರೊಬ್ಬರು ಸಚಿವರನ್ನು ಕಳುಹಿಸಿಕೊಟ್ಟು ಸಮಸ್ಯೆಗೆ ಪರಿಹಾರ ಹುಡುಕುವ ಕೆಲಸವಾಗಬೇಕು.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು):- ಈ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆ ಕೂಡ ಪ್ರಸ್ತಾಪಿಸಿದರು. ಅದೇ ರೀತಿ ಬೆಳಿಗ್ಗೆ ಸದಸ್ಯರಾದ ಜಗದೀಶ್ ಶೆಟ್ಟರ್‌ರವರೂ ಕೂಡ ನನಗೆ ಫೋನ್ ಮಾಡಿದರು. ಇವೊತ್ತು ಬೆಳಿಗ್ಗೆ 9.30 ಗಂಟೆಗೆ ಅಲ್ಲಿ ಆಮರಣಾಂತ ಉಪವಾಸ ಕೈಗೊಂಡಿರುವ ಸಂಸದರಾದ ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್ ಅವರೊಂದಿಗೆ ಮಾತನಾಡಿದ್ದೇನೆ. ಅವರೊಂದಿಗೆ ಮಾತುಕತೆಯಾಡಿ ಬರಲು ಇವೊತ್ತು ಅಲ್ಲಿಗೆ ಮಾನ್ಯ ಕಂದಾಯ ಸಚಿವರಾದ ಎಂ.ಪಿ.ಪ್ರಕಾಶ್ ಅವರನ್ನು ವಿಶೇಷ ವಿಮಾನದಲ್ಲಿ ಅಲ್ಲಿಗೆ ಕಳುಹಿಸಿಕೊಡುತ್ತಿದ್ದೇವೆ. 2 ಅಥವಾ 8ನೇ ತಾರೀಖಿನಂದು ಸಭೆ ಏರ್ಪಡಿಸಿ, ಅವರನ್ನು ಕರೆಸಿ ಮಾತುಕತೆಯಾಡುವ ವ್ಯವಸ್ಥೆ ಮಾಡುತ್ತೇವೆ.

(ಆ) ವಿರೋಧ ಪಕ್ಷದ ಸದಸ್ಯರುಗಳಿಗೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ನೀಡುವ ಬಗ್ಗೆ:-

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡಲಿ. ತಾವು ಯೋಚಿಸಬೇಕು. ನಾವು ಉತ್ತಮ ಸಹಕಾರ ನೀಡಿದ್ದೇವೆ, ನೀವೂ ಸಹ ಅದೇ ತರಹ ನಡೆದುಕೊಂಡಿದ್ದೀರಿ. ನಮ್ಮ ಪಕ್ಷದ 75 ಮಂದಿ ಶಾಸಕರಿದ್ದೇವೆ. ಅದಕ್ಕೋಸ್ಕರ, ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆವರೆಗೂ ಕುಳಿತುಕೊಳ್ಳುವುದಕ್ಕೆ ಸಹಕಾರ ನೀಡುತ್ತೇವೆ. ನಮ್ಮ ಕಡೆಯಿಂದ ಇನ್ನೂ 24-25 ಶಾಸಕರುಗಳು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸಲು ಮಾತನಾಡಬೇಕಾಗಿದೆ. ಅವಶ್ಯವಿದ್ದರೆ, ಅಧಿವೇಶನದ ಅವಧಿಯನ್ನು ಸೋಮವಾರ, ಮಂಗಳವಾರದವರೆಗೂ ವಿಸ್ತರಿಸಿದರೆ ಚಿಂತೆಯಿಲ್ಲ. ಆದರೆ, ಹೊಸದಾಗಿ ಆಯ್ಕೆಯಾಗಿ ಬಂದಿರುವ, ಈ ಭಾಗದಲ್ಲಿರುವ ಶಾಸಕರುಗಳಿಗೆ ನೀವು ಪಕ್ಷದ ಆಧಾರದ ಮೇಲಾದರೂ ಸಮಯ ನಿಗದಿಪಡಿಸಬೇಕು. ನೀವು ಸಮಯ ಕೊಡದಿದ್ದರೆ, ನಮ್ಮ ಶಾಸಕರುಗಳಿಗೆ ನಾವು ಉತ್ತರಿಸುವುದು ಕಷ್ಟವಾಗುತ್ತದೆ. ಅವರೆಲ್ಲರೂ ವಿಧಾನಸಭೆಗೆ ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ. ಅವರ ಕ್ಷೇತ್ರಗಳಲ್ಲಿ ಜ್ವಲಂತ ಸಮಸ್ಯೆಗಳಿವೆ. ಅಪರೂಪಕ್ಕೆ ಎಂಟು ತಿಂಗಳಾದ ಬಳಿದ ಅಧಿವೇಶನ ಸೇರಿರುವ ಸಮಯದಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಸಂದರ್ಭದಲ್ಲಿ 10-10 ನಿಮಿಷಗಳ ಕಾಲವಾದರೂ ಅವರಿಗೆ ಸಮಯ ಸಿಗದಿದ್ದರೆ, ಅವರು ಶಾಸಕರಾಗಿ ಇಲ್ಲಿಗೆ ಆಯ್ಕೆಯಾಗಿ ಬಂದು ಕುಳಿತುಕೊಳ್ಳುವುದು ಕಷ್ಟವಾಗುತ್ತದೆ. ಮತ್ತು ಜನರಿಗ ಮುಖ ತೋರಿಸಲೂ ಕಷ್ಟವಾಗುತ್ತದೆ. ಅವರಿಗೆ ಮಾತನಾಡಲು ಸಮಯವನ್ನು ಹೇಗೆ ಹೊಂದಿಸಿಕೊಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ಬೇಕಾದರೆ, ನಾವು ಸೋಮವಾರ, ಮಂಗಳವಾರದವರೆಗೂ ಕುಳಿತುಕೊಳ್ಳಲು ಸಿದ್ದರಿದ್ದೇವೆ. ನಮ್ಮ ಪಕ್ಷದ

ಶಾಸಕರುಗಳಿಗೆ ಸರಿಯಾದ ರೀತಿ ಅವಕಾಶಗಳು ಸಿಗಬೇಕು. ಯಾರಿಗೆ ಎಷ್ಟು ಸಮಯ ನಿಗದಿಪಡಿಸುತ್ತೀರಿ, ಹೇಗೆ ನಿಗದಿಪಡಿಸುತ್ತೀರಿ ಎಂಬುದು ನಿಮಗೆ ಬಿಟ್ಟ ತೀರ್ಮಾನ. ಅದನ್ನು ನಾನು ಪ್ರಶ್ನಿಸವುದಿಲ್ಲ, ಆ ಅಧಿಕಾರವೂ ನನಗಿಲ್ಲ. ಆದರೆ, ಎಲ್ಲರಿಗೂ ಸರಿಯಾದ ಸಮಯ ನಿಗದಿಪಡಿಸಿಕೊಡುವ ಮೂಲಕ ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಕಲ್ಪಿಸಿಕೊಡುವುದು ತಮ್ಮ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ನಾನು ಮತ್ತೊಮ್ಮೆ ತಮಗೆ ನೆನಪಿಸಲು ಇಷ್ಟಪಡುತ್ತೇನೆ.

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ–ಮುಂದು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ, ಶೀಘ್ರವಾಗಿ ತೀರ್ಮಾನ ಕೈಗೊಳ್ಳಬೇಕಾಗಿರುವ ಕೆಲವು ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳೆ, ಗ್ರಾಮ ಪಂಚಾಯತ್ ಚುನಾವಣೆ ಬರುತ್ತಿದೆ. ಕೆಎಎಸ್ ಎಗ್ಜಾಮ್ಸ್ ನಡೆಯುತ್ತದೆ. ಅದು ಕ್ಲಾಷ್ ಆಗಬಾರದು. ಒಂದು ಕೆಎಎಸ್ ಪರೀಕ್ಷೆಯನ್ನು ಮುಂದೆ ಹಾಕಲಿಕ್ಕೆ ಹೇಳಬೇಕು. ಇಲ್ಲದಿದ್ದರೆ, ಈ ಗ್ರಾಮ ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಅದು ಕ್ಲಾಷ್ ಆದಾಗ ಪರೀಕ್ಷೆ ತೆಗೆದುಕೊಳ್ಳುವವರಿಗೆ ತೊಂದರೆಯಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಾ, ದಯವಿಟ್ಟು ಇದರ ಬಗ್ಗೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮಗೆ ತಿಳಿಸಲು ಇಚ್ಛಿಪಡುತ್ತಿದ್ದೇನೆ. ನಿನ್ನೆ ಮಾನ್ಯ ಮಾಧುಸ್ವಾಮಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಚೀಫ್ ಇಂಜಿನಿಯರ್ ಪೋಸ್ಟ್ ಎಷ್ಟು ವೇಕೆಂಟ್ ಇದೆ ಎಂದು ಕೇಳಿದರು. ಚೀಫ್ ಇಂಜಿನಿಯರ್ ಪೋಸ್ಟ್ ವೇಕೆಂಟ್ ಇದ್ದರೂ ಸರ್ಕಾರದಲ್ಲಿ ಏನೂ ತೊಂದರೆಯಾಗದಿದ್ದರೆ, ಅಷ್ಟು ಪೋಸ್ಟ್ ಕ್ರಿಯೇಟ್ ಮಾಡುವುದು ಏಕೆ? ಅಷ್ಟು ಪೋಸ್ಟ್ ಅಗತ್ಯವಿಲ್ಲದಿದ್ದರೆ, ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿ. ಅಧಿಕಾರಿಗಳಿಗೋಸ್ಕರ ಪೋಸ್ಟ್ ಕ್ರಿಯೇಟ್ ಮಾಡಬೇಡಿ. ಪೋಸ್ಟ್‌ಗಳನ್ನು ಅಬಲಿಷ್ ಮಾಡಿ. ಸರ್ಕಾರಕ್ಕೂ ಹಣವನ್ನು ಉಳಿಸಲು ಸಾಧ್ಯವಾಗುತ್ತದೆ. ಅದಕ್ಕೋಸ್ಕರ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈ ಒಂದು ಪೋಸ್ಟ್‌ಗಳ ಬಗ್ಗೆ ಕೇಳುವುದೇನೆಂದರೆ, ದಯವಿಟ್ಟು ನೀವು ಫಿಲ್–ಅಪ್ ಮಾಡಿ, ಬೇಡದಿದ್ದರೆ ಅಬಾಲಿಷ್ ಮಾಡಿ. ಎರಡರಲ್ಲಿ ಒಂದಾಗಬೇಕಾಗುತ್ತದೆ. ರಾಜ್ಯಪಾಲರ ಭಾಷಣ ಇದು ಸರ್ಕಾರದ ಪಕ್ಷಿನೋಟ ಅಥವಾ ದಿಕ್ಸೂಚಿ. ಹಿಂದೆ ಮಾಡಿದ ಕೆಲಸಗಳು, ಮುಂದೆ ಏನೇನು ಮಾಡಬೇಕೆನ್ನುವುದು. ಹಿಂದೆ ಮಾಡಿದ ಕೆಲಸಗಳ ಬಗ್ಗೆ ಅನೇಕ ವಿಷಯಗಳನ್ನು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಆದರೆ, ಮುಂದೆ ಏನನ್ನು ಮಾಡಬೇಕೆನ್ನುವ ಬಗ್ಗೆ ಹೆಚ್ಚು ಮಾಹಿತಿ ಕೊಟ್ಟಿಲ್ಲ. ಇದೆಲ್ಲದರಲ್ಲಿ ಪ್ರಮುಖವಾಗಿ ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದೆಂದರೆ, ಬಹಳ ಯಶಸ್ಸನ್ನು ಕಂಡಂಥದ್ದು ಯಶಸ್ವಿನಿ. ಯಶಸ್ವಿನಿ ಕಾರ್ಯಕ್ರಮವನ್ನು ಏನು ತಾವು ತಂದಿದ್ದೀರಿ, ಅದನ್ನು ಅನ್–ಆರ್ಗನೈಜ್ಡ್ ಸೆಕ್ಟಾರ್ ಮತ್ತು ಕೃಷಿ, ಕೂಲಿ ಕಾರ್ಮಿಕರಿಗೆ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದಿರಿ. It is a very good decision. ಆದರೆ, ಯಾವಾಗ ಅವರು ಆಸ್ಪತ್ರೆಗೆ ಸೇರುತ್ತಾರೆ, ಆಸ್ಪತ್ರೆಗೆ ಸೇರಿದ ಕೂಡಲೇ ಅವರು ಆಸ್ಪತ್ರೆಯಿಂದ ವರದಿಯನ್ನು ಕಳುಹಿಸುತ್ತಾರೆ, ಆಗ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆ ಆಗಬೇಕು. ವರದಿ ಹೋದ ನಂತರ ಒಂದು ವಾರ ಆಗುವುದಿಲ್ಲ, 20 ದಿವಸ ಆಗುವುದಿಲ್ಲವೆಂದರೆ ಶಸ್ತ್ರ ಚಿಕಿತ್ಸೆ ಈ ಹಣಕ್ಕೋಸ್ಕರ ಕಾಯುವುದಿಲ್ಲ. ದಯವಿಟ್ಟು, ಕೆಲಸ ಮಾಡುತ್ತಿಲ್ಲವೆಂದು ಹೇಳುವುದಿಲ್ಲ. ಅದಷ್ಟು ಶೀಘ್ರದಲ್ಲಿ ಹಣವನ್ನು ಆಸ್ಪತ್ರೆಗೆ ಮುಟ್ಟಿಸುವ ವ್ಯವಸ್ಥೆಯನ್ನು ಮಾಡಿ. Health card help to the . . .